ದಿನಾಂಕ :24-05-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಸಿ ಎಸ್ ಎ ವಕೀಲರಿಂದಃ</u>

ಸರ್ವೆ ನಂ.16/2 ಇದರ ಪೂರ್ಣ ವಿಸೀರ್ಣ 3 ಎಕರೆ 7 ಗುಂಟೆ ಅಂದರೆ ಸರಿ. ನನಗೆ ಇಬ್ಬರು ಅಣ್ಣಂದಿರು, ಅವರ ಹೆಸರು ಗಂಗೋಜಿರಾವ್, ಕೃಷೋಜಿರಾವ್. ಕೃಷೋಜಿರಾವ್ ರವರು ಓ ಎಸ್ ನಂ.295/1995 ಇದನ್ನು ಭಾಗಾಂಶ ಕೇಳಿ ತಮ್ಮ ತಂದೆ ಮತ್ತು ಗಂಗೋಜಿರಾವ್ ರವರ ವಿರುದ್ಧ ದಾವೆ ಮಾಡಿದ್ದರು ಅಂದರೆ ನನಗೆ ಗೊತ್ತಿಲ್ಲ. ಆ ದಾವೆ ಡಿಕ್ರಿಯಾಗಿತ್ತು ಅಂದರೆ ನನಗೆ ಗೊತ್ತಿಲ್ಲ ನಂತರ ಆ ಡಿಕ್ರಿ ಮೇಲೆ ಎಫ್ ಡಿ ಪಿ ಯನ್ನು ಸಲ್ಲಿಸಲಾಗಿತ್ತು ಅಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಸರ್ವೆಯರ್ ಅಳತೆ ಮಾಡಿ ಸರ್ವೆ ನಂ.16/2 ರಲ್ಲಿ 2 ಎಕರೆ 4 ವರೆ ಗುಂಟೆ ಇದನ್ನು ಕೃಷೋಜಿರಾವ್ ರವರಿಗೆ ಕೊಡಬೇಕು ಅಂತ ಆದೇಶ ಆಗಿತ್ತು ಅಂದರೆ ನನಗೆ ಗೊತ್ತಿಲ್ಲ. ಎಫ್ ಡಿ ಸಿ ಡಿಕ್ರಿಯಾದ ನಂತರ ಈ ಆಸ್ತಿ 2 ನೇ ಪ್ರತಿವಾದಿ ಕೃಷೋಜಿರಾವ್ ರವರ ಹೆಸರಿನಲ್ಲಿ ವರ್ಗಾವಣೆ ಆಗಿತ್ತು ಅಂದರೆ ನನಗೆ ಗೊತ್ತಿಲ್ಲ. ಈಗೆ ಕೊರ್ಟ ಡಿಕ್ರಿ ಮುಖಾಂತರ ಬಂದ 2 ಎಕರೆ 4 ವರೆ ಗುಂಟೆಯಲ್ಲಿ 1 ಎಕರೆ 4 ವರೆ ಗುಂಟೆಯನ್ನು ತಮ್ಮ ಮಗಳ ಹೆಸರಿಗೆ 2 ನೇ ಪ್ರತಿವಾದಿ ದಾನ ಬರೆದು ಕೊಟ್ಟಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ದಾನ ಪತ್ರದ ನಂತರ ಅವರ ಮಗಳು ಆ 1 ಎಕರೆ 4 ವರೆ ಗುಂಟೆಯಲ್ಲಿ ಅಡಿಕೆ ಸಸಿಗಳನ್ನು ನೆಟ್ಟು ಅದರಲ್ಲಿ ಉಳುಮೆ ಮಾಡಿಕೊಂಡು ಇದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಕಲಾವತಿಯವರಿಗೆ ದಾನಪತ್ರದ ಮುಖಾಂತರ ಬಂದ 1 ಎಕರೆ 4 ವರೆ ಗುಂಟೆಯನ್ನು ಸರ್ವೆ ಅಧಿಕಾರಿಗಳು ಮತ್ತೊಮ್ಮೆ ಸರ್ವೆ ಮಾಡಿ ಅವರಿಗೆ ಬೇರೆ ಸರ್ವೆ ನಂಬರ ಅಂದರೆ 16/9 ಅಂತ ನಂಬರ ಕೊಟ್ಟಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಉಳಿದ 1 ಎಕರೆ ಜಮೀನನ್ನು ತಮ್ಮ ಎರಡನೇ ಮಗಳು ನೇತ್ರಾವತಿಯವರಿಗೆ ದಾನ ಬರೆದುಕೊಟ್ಟಿದ್ದಾರೆ ಅಂದರೆ ಗೊತ್ತಿಲ್ಲ. ದಿಃ 01-07-2015 ರಂದು ನೇತ್ರಾವತಿ ಕಲಾವತಿಯವರಿಗೆ ಆ 1 ಎಕರೆ ಜಮೀನನ್ನು ದಾನ ಬರೆದುಕೊಟ್ಟಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಆ 1 ಎಕರೆಯಲ್ಲಿಯೂ ಸಹ ಕಲಾವತಿಯವರೆ ಸ್ವಾಧೀನದಲ್ಲಿದ್ದಾರೆ ಅಂದರೆ ಗೊತ್ತಿಲ್ಲ. ನೇತ್ರಾವತಿಯವರಿಂದ ದಾನ ಪಡೆದುಕೊಂಡ 1 ಎಕರೆ ಜಮೀನು ಈಗ ಸರ್ವೆ ನಂ.16/8 ಅಂತ ಸರ್ವೆ ಪೋಡಾಗಿದೆ ಅಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಗಳು 2 ಮತ್ತು 3 ಐಟಂಗಳು 3 ನೇ ಪ್ರತಿವಾದಿಗೆ ಸೇರಿದ್ದು ಅದರಲ್ಲಿ ನನಗೆ ಯಾವುದೇ ಹಕ್ಕಿಲ್ಲ ಅಂದರೆ ಸರಿಯಲ್ಲ. ದಾವಾ ಐಟಂ ನಂ.4 ಸರ್ವೆ ನಂ.16/1, ವಿಸ್ತೀರ್ಣ 3 ಎಕರೆ 16 ಗುಂಟೆ ಜಮೀನು ಕೃಷ್ಣೋಜಿರಾವ್ ರವರ ಮಗ ಹನುಮಂತರಾವ್ ರವರಿಗೆ ಸೇರಿದ್ದು ಅಂದರೆ ಸರಿಯಲ್ಲ. ಈ ದಾವಾ ಐಟಂ ನಂ.4 ಶ್ಯಾಮ್ ರಾವ್ ರವರಿಗೆ ಸೇರಿದ್ದಲ್ಲ

ಮತ್ತು ಅವರ ತಂದೆಗೂ ಸೇರಿದ್ದಲ್ಲ ಅಂದರೆ ಸರಿಯಲ್ಲ. ಹನುಮಂತರಾವ್ ರವರನ್ನು ನಾನು ನೋಡಿಲ್ಲ. ಹನುಮಂತರಾವ್ ರವರಿಗೆ ಮಕ್ಕಳಿಲ್ಲದ ಕಾರಣ ಕೃಷ್ಣೋಜಿರಾವ್ ಮತ್ತು ಅವರ ಹೆಂಡತಿಯನ್ನು ತಮ್ಮ ಜೊತೆಗೆ ಇಟ್ಟುಕೊಂಡಿದ್ದರು ಅಂದರೆ ಸರಿಯಲ್ಲ. ಹನುಮಂತರಾವ್ ರವರ ಜೊತೆ ಕೃಷ್ಣೋಜಿರಾವ್ ವಾಸ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಕೃಷ್ಣೋಜಿರಾವ್ ಮತ್ತು ಅವರ ಹೆಂಡತಿ ಹನುಮಂತರಾವ್ ರವರನ್ನು ಚೆನ್ನಾಗಿ ನೋಡಿಕೊಂಡಿದ್ದರಿಂದ ದಿಃ 15-01-1978 ರಲ್ಲಿ ಹನುಮಂತರಾವ್ ರವರು ದಾವಾ ಐಟಂ ನಂ.4 ನ್ನು 2 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಹೆಸರಿಗೆ ಮರಣ ಶಾಸನ ಮಾಡಿದ್ದರು ಅಂದರೆ ನನಗೆ ಗೊತ್ತಿಲ್ಲ. ನಂತರ ಹನುಮಂತರಾವ್ ರವರು ಮೃತಪಟ್ಟಿದ್ದು, ಅವಾಗಿನಿಂದ 2 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ದಾವಾ ಐಟಂ ನಂ.4 ಆಸ್ತಿಯ ಒಡೆತನ ಹೊಂದಿ ಅದರ ಸ್ವಾಧೀನದಲ್ಲಿದ್ದಾರೆ ಅಂದರೆ ಸರಿಯಲ್ಲ. ಆ ಮರಣ ಶಾಸನದ ಆಧಾರದಲ್ಲಿ ದಾವಾ ಐಟಂ ನಂ.4 ಆಸ್ತಿ ಎರಡನೇ ಪ್ರತಿವಾದಿ ಮತ್ತು ಅವರ ಹೆಂಡತಿಯ ಹೆಸರಿಗೆ ವರ್ಗಾವಣೆ ಆಗಿದೆ ಅಂದರೆ ನನಗೆ ಗೊತ್ತಿಲ್ಲ. ದಾವಾಸ್ತಿ ಐಟಂ .4, 5 ರಲ್ಲಿ ನನಗೆ ಯಾವುದೇ ಹಕ್ಕು, ಹಿತಾಶಕ್ತಿ ಇಲ್ಲದೆ ಇದ್ದರೂ ನಾನು ಈ ಕೇಸಿನಲ್ಲಿ ಸುಳ್ಳು ಸೇರಿಸಿದ್ದೇನೆ ಅಂದರೆ ಸರಿಯಲ್ಲ. ಸರ್ವೆ ನಂ.84/8 ರಲ್ಲಿ ನನಗೆ 1 ಎಕರೆ 1 ಗುಂಟೆ ಆಸ್ತಿ ಬಂದಿದೆ ಅಂದರೆ ಸರಿಯಲ್ಲ. ನಾನು ನನ್ನ ತಂದೆ ಶ್ಯಾಮ್ ರಾವ್ ರವರ ಬಳಿ ನನ್ನ ಭಾಗದ ಆಸ್ತಿಗಾಗಿ ಸರ್ವೆ ನಂ.84/8 ರಲ್ಲಿ 1 ಎಕರೆ 1 ಗುಂಟೆಯನ್ನು ದಾನ ಬರೆಸಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಸರ್ವೆ ನಂ.84/8 ನನ್ನ ಹೆಸರಿಗೆ ಖಾತೆ ಆಗಿದೆ ಅಂದರೆ ಗೊತ್ತಿಲ್ಲ. ಸರ್ವೆ ನಂ.84/8 ರಲ್ಲಿ 16 ಗುಂಟೆಯನ್ನು ರಾಮಚಂದ್ರ ರಾವ್ ರವರಿಗೆ ಮಾರಾಟ ಮಾಡಿದ್ದೇನೆ ಅಂದರೆ ಸರಿಯಲ್ಲ. ಸರ್ವೆ ನಂ.84/8, 16 ಗುಂಟೆಯಲ್ಲಿ ರಾಮಚಂದ್ರರಾವ್ ಸ್ವಾಧೀನದಲ್ಲಿದ್ದಾರೆ ಅಂದರೆ ಗೊತ್ತಿಲ್ಲ. ಸರ್ವೆ ನಂ.84/8, ಈಗಾಗಲೇ ನಾನು ನನ್ನ ಭಾಗ ಅಂತ ತೆಗೆದುಕೊಂಡಿದ್ದು, ಈಗ ನನಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ. ನನಗೆ ದಾವಾಸ್ತಿಗಳಲ್ಲಿ ಯಾವುದೇ ಹಕ್ಕು, ಹಿತಾಶಕ್ತಿ ಇಲ್ಲದೆ ಇದ್ದರೂ ನಾನು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆಎಂಎಫಸಿ, ಗುಬ್ಬಿ.